# ಅದ್ವೈತದಲ್ಲಿ ಮಾಯೆಯ ಸ್ಥಾನ

ಸ್ವಾಮಿ ಸುರೇಶಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

**ದೃ**ಷ್ಟಾಂತಗಳಿಂದ ಅನೇಕ ವಿಷಯಗಳನ್ನು ವಿಶದಪಡಿಸಬಹುದಾದರೂ ಅವುಗಳನ್ನು ಅಕ್ಷರಶಃ ಪ್ರಕೃತ ವಿಷಯಗಳಲ್ಲಿ ಜೋಡಿಸಲಾಗದು. ವಿಷಯದ ಕೆಲವಂಶಗಳನ್ನು ಮಾತ್ರ ದೃಷ್ಟಾಂತ ಸ್ಪಷ್ಟಪಡಿಸಬಲ್ಲದು. ವಸ್ತುವು ತನ್ನ ನಿಜಸ್ವರೂಪವನ್ನು ಬದಲಾಯಿಸದೆ ಕಾರಣಾಂತರಗಳಿಂದ ಅನ್ಯಥಾ ತೋರಬಹುದೆನ್ನುವುದಕ್ಕೆ ರಜ್ಜು, ಸರ್ಪ (ಹಗ್ಗ, ಹಾವು)ಗಳ ದೃಷ್ಟಾಂತ ಸಹಾಯ ಮಾಡೀತು. ಆದ್ದರಿಂದ ಪ್ರಾತಿಭಾಸಿಕ ಪದಾರ್ಥಗಳಿಗೂ ಪ್ರಪಂಚಕ್ಕೂ ಅದ್ವೈತಾಚಾರ್ಯರುಗಳು ಸ್ವಲ್ಪ ವ್ಯತ್ಯಾಸ ಕಲ್ಪಿಸಿ ವ್ಯವಹಾರ ಕಾಲದಲ್ಲಿ ಜಗತ್ತಿನ ಸತ್ಯತ್ವವನ್ನು ಒಪ್ಪಿಕೊಂಡಿದ್ದಾರೆ. ಪ್ರಪಂಚ ಮಿಥ್ಯಾ ಎಂದರೆ ಪರಮಾರ್ಥ ದೃಷ್ಟಿಯಿಂದ, ಬ್ರಹ್ಮಜ್ಞಾನಿಯ ದೃಷ್ಟಿಯಿಂದ; ವ್ಯವಹಾರ ದೃಷ್ಟಿಯಿಂದಲ್ಲ, ಅಜ್ಞಾನಿಯ ದೃಷ್ಟಿಯಿಂದಲ್ಲ. ಹೆಚ್ಚೇಕೆ, ಅದ್ವೈತವೆನ್ನುವ ಮಾತು ಕೂಡ ವ್ಯವಹಾರ ದೆಸೆಯಲ್ಲಿ ಮಾತ್ರ ಸರಿಹೊಂದುತ್ತದೆ. ಪರಮಾರ್ಥ ತತ್ತ್ವವು ದ್ವೈತಾದ್ವೈತ ವಿವರ್ಜಿತ ಎಂಬುದಾಗಿ ಅದ್ವೈತಾಚಾರ್ಯರುಗಳೇ ಹೇಳಿರುತ್ತಾರೆ.

ಹೊರಗಡೆ ತೋರುತ್ತಿರುವ ಪ್ರಪಂಚಕ್ಕೆ ನೋಡುವಾತನ ಅಜ್ಞಾನವೇ ಕಾರಣವೆಂದಾದರೆ, ಅನೇಕ ವ್ಯಕ್ತಿಗಳು ನೋಡುತ್ತಿರುವಾಗ ಯಾರ ಅಜ್ಞಾನ ಜಗತ್ತಿಗೆ ಕಾರಣ, ಯಾರ ಅಜ್ಞಾನ ನಾಶವಾದರೆ ಜಗತ್ತು ಬ್ರಹ್ಮವಾಗುತ್ತದೆ ಎಂಬ ಈ ಪ್ರಶ್ನೆಗಳು ಉದ್ಭವಿಸುತ್ತವೆ. ಮೊದಲೇ ಹೇಳಿದಂತೆ ವ್ಯವಹಾರ ದೆಸೆಯಲ್ಲೇ ಬಾಹ್ಯಾರ್ಥಗಳ ಸತ್ಯತ್ವವನ್ನು ಅಲ್ಲಗಳೆಯುವುದು ಅಸಮಂಜಸ. ಅವೆಲ್ಲಕ್ಕೂ, ನೋಡುವಾತನ ಅಜ್ಞಾನವೇ ಕಾರಣವೆಂದಲ್ಲಿ ಯುಕ್ತಿಯುಕ್ತವಾಗಲಾರದೆಂದು ಅದ್ವೈತ ಆಚಾರ್ಯರುಗಳು ಈ ಅಜ್ಞಾನವನ್ನು ವ್ಯಷ್ಟಿ, ಸಮಷ್ಟಿ ಎಂಬುದಾಗಿ ವಿಭಾಗಿಸಿ, ಸಮಷ್ಟಿ ಅಜ್ಞಾನವೇ ವಿಶ್ವಸೃಷ್ಟಿಗೆ ಕಾರಣವೆಂದೂ, ವ್ಯಷ್ಟಿ ಅಜ್ಞಾನದಿಂದಾಗಿ ಜೀವನ ಜೀವತ್ವ, ಸ್ಥೂಲ-ಸೂಕ್ಷ್ಮ-ಶರೀರಗಳ ಸಂಬಂಧ ಬರುವುದಾಗಿಯೂ ಹೇಳುತ್ತಾರೆ. ಈ ವಿಷಯದಲ್ಲಿ ಅದ್ವೈತಿಗಳಲ್ಲೇ ಅನೇಕ ಭಿನ್ನಾಭಿಪ್ರಾಯಗಳನ್ನು ನಾವು ನೋಡಬಹುದು. ಕಾರ್ಯಕಾರಣ ಭಾವ (causation) ಎನ್ನುವುದು ನಮ್ಮ ಮನಸ್ಸಿನಲ್ಲಿ ಬೇರೂರಿದೆ. ವ್ಯವಹಾರ ಕಾಲದಲ್ಲಿ ಅದನ್ನು ಒಪ್ಪಲೂ ಬೇಕು. ನಮ್ಮೆಲ್ಲರ ಅನುಭವ ಹಾಗಿರುವುದರಿಂದ, ದೃಷ್ಟಿಗೆ ಗೋಚರವಾಗುತ್ತಿರುವ ಕಾರ್ಯರೂಪವಾದ ಪ್ರಪಂಚಕ್ಕೆ ಕಾರಣವೊಂದನ್ನು ಹೇಳಲೇಬೇಕಾಗಿ ಇರುವುದರಿಂದಲೂ ಸಾಕ್ಷಾತ್ ಬ್ರಹ್ಮವನ್ನೇ ಕಾರಣವಾಗಿ ಹೇಳಿದಲ್ಲಿ ಇತರ ಅನೇಕ ದೋಷಗಳು ಬರುವುದರಿಂದಲೂ, ಬ್ರಹ್ಮಕ್ಕೆ ಭಿನ್ನವೆಂದಾಗಲೀ, ಅಭಿನ್ನವೆಂದಾಗಲಿ ಹೇಳಲು ಅಸಾಧ್ಯವಾದ ಅಜ್ಞಾನವನ್ನು ಅಥವಾ ಮಾಯೆಯನ್ನು ಜಗತ್ತಿಗೆ ಕಾರಣವಾಗಿ ಹೇಳುತ್ತಾರೆಯೇ ವಿನಾ ಅದ್ವೈತದಲ್ಲಿ ಮಾಯೆಗೆ ಸ್ವತಂತ್ರ ಸ್ಥಾನವನ್ನು ಕೊಟ್ಟಿಲ್ಲ. ಪರಮಾರ್ಥ ದೃಷ್ಟಿಯಿಂದ ಬ್ರಹ್ಮವೊಂದೇ ಸತ್ಯವಾದ್ದರಿಂದ ಕಾರ್ಯರೂಪವಾದ ಜಗತ್ತೆಂಬುದು ಬೇರೆಯಿಲ್ಲ. ಅದಕ್ಕೆ ಕಾರಣವಾಗಿ ಮಾಯೆಯೂ ಬೇಕಿಲ್ಲ.

ಬ್ರಹ್ಮವೇ ವಿಶ್ವಕ್ಕೆ ಸಾಕ್ಷಾತ್ತಾಗಿ ಕಾರಣವೆಂದರೆ ದೋಷವೇನೆಂಬುದು ಸ್ವಲ್ಪ ವಿಚಾರಣೀಯ. **ಯತೋ ವಾ ಇಮಾನಿ ಭೂತಾನಿ ಜಾಯಂತೇ** ಮೊದಲಾದ ವಾಕ್ಯಗಳಿಂದ ಶ್ರುತಿ, ಬ್ರಹ್ಮವನ್ನು ಜಗತ್ಕಾರಣವಾಗಿ ಹೇಳಿದೆ. ವಾಸ್ತವಿಕವಾಗಿ ಸೃಷ್ಟಿಗೆ ಬ್ರಹ್ಮ ಕಾರಣವಾದಲ್ಲಿ ಅದರ ಸತ್ಯತ್ವ, ನಿತ್ಯತ್ವ, ಅನಂತತೆಗಳಿಗೆ ಭಂಗ ಬಂದೀತು. ಸಾವಯವತ್ವ ದೋಷವೂ ಬಂದೀತು. ಅಲ್ಲದೇ ಕಾರಣದ ಸ್ವಭಾವ ಕಾರ್ಯದಲ್ಲೂ ಇರಬೇಕಾದ್ದರಿಂದ ಜಗತ್ತು ಸತ್ಯವಾಗಿಯೂ, ನಿತ್ಯವಾಗಿಯೂ, ಅನಂತವಾಗಿಯೂ ಇರಬೇಕಾಗುವುದು. ಕಾರ್ಯವೆಂದರೇ ಹುಟ್ಟುಳ್ಳದ್ದೆಂದಾಗುವುದರಿಂದ ಪ್ರಪಂಚ ನಿತ್ಯವಲ್ಲವೆಂದಾಯಿತು. ವಾಸ್ತವಿಕವಾಗಿ ಬ್ರಹ್ಮ ಜಗತ್ತಾಗಿಬಿಟ್ಟರೆ ಅದರ ಸತ್ಯತೆಗೂ ಭಂಗ ಬಂದೀತು. ಆದ್ದರಿಂದ ಶ್ರುತಿಯಲ್ಲಿ ಹೇಳಿದ ಸೃಷ್ಟಿವಾಕ್ಯಗಳ ಅಭಿಪ್ರಾಯ, ವ್ಯವಹಾರಕಾಲದಲ್ಲಿ ಕಾಣುತ್ತಿರುವ ಸೃಷ್ಟಿ ಸ್ಥಿತಿ ಲಯಗಳೂ ಬ್ರಹ್ಮದಲ್ಲೇ ಆಗುತ್ತವೆ, ಬ್ರಹ್ಮಭಿನ್ನವಾದ ಸೃಷ್ಟಿ ಇಲ್ಲವೆನ್ನುವುದನ್ನು ತೋರಿಸುವುದೇ ಆಗಿದೆ. **ಮೃಲ್ಲೋಹ ವಿಸ್ಫುಲಿಂಗಾದ್ಯೈಃ ಸೃಷ್ಟಿರ್ಯಾ ಚೋದಿತಾನ್ಯಥಾ । ಉಪಾಯಃ ಸೋವತಾರಾಯ ನಾಸ್ತಿಭೇದಃ ಕಥಂಚನ ॥** ಮಣ್ಣು, ಕಬ್ಬಿಣ, ಬೆಂಕಿಯ ಕಿಡಿ ಮೊದಲಾದ ದೃಷ್ಟಾಂತಗಳಿಂದ ಶ್ರುತಿ ಸೃಷ್ಟಿಯನ್ನು ಹೇಳುತ್ತಿರುವುದು, ಅದು ಬ್ರಹ್ಮಕ್ಕಿಂತ ಬೇರೆಯಲ್ಲ ಎನ್ನುವುದನ್ನು ತೋರಿಸುವುದಕ್ಕಾಗಿಯೇ ಹೊರತು ವಾಸ್ತವಿಕವಾದ, ಬ್ರಹ್ಮಭಿನ್ನವಾದ ಜಗತ್ತು ಇದೆ ಎನ್ನುವುದನ್ನು ತೋರಿಸುವುದಕ್ಕಲ್ಲ ಎಂದು ಗೌಡಪಾದಾಚಾರ್ಯರು ಸ್ಪಷ್ಟಪಡಿಸಿದ್ದಾರೆ. ಎಂದರೆ ವ್ಯವಹಾರಕಾಲದಲ್ಲೂ ತೋರುತ್ತಿರುವ ಪ್ರಪಂಚ ಬ್ರಹ್ಮಕ್ಕಿಂತ ಭಿನ್ನವಲ್ಲವೆಂದಾಯಿತು. ಈ ತೋರುವಿಕೆಗೆ ಬ್ರಹ್ಮವೇ ಅಡಿಗಲ್ಲಾದರೂ (ಅಧಿಷ್ಠಾನ), ಅದೇ ಕಾರಣವೆಂದು ಹೇಳಲಾಗದು. ಆದ್ದರಿಂದ ಅನಿರ್ವಚನೀಯವಾದ ಮಾಯೆಯನ್ನು ಅಥವಾ ಅಜ್ಞಾನವನ್ನು ಕಾರಣವಾಗಿ ಒಪ್ಪಿಕೊಂಡಿದ್ದಾರೆ.

ಅದ್ವೈತಕ್ಕೆ ಹಾನಿಬರುವುದೆಂದು ಬ್ರಹ್ಮಭಿನ್ನವಾದ ಜಗತ್ತನ್ನು ಹೇಗೆ ಅದ್ವೈತದಲ್ಲಿ ಪರಮಾರ್ಥತಃ ಒಪ್ಪಿಕೊಂಡಿಲ್ಲವೋ ಹಾಗೆಯೇ ಪರಮಾರ್ಥತಃ ಮಾಯೆಯ ಅಸ್ತಿತ್ವವನ್ನೂ ಒಪ್ಪಿಕೊಂಡಿಲ್ಲ. ನಾವು ಮೊದಲೇ ನೋಡಿದಂತೆ ವ್ಯವಹಾರ ಕಾಲದಲ್ಲಿ ಕಾರ್ಯಕಾರಣ ಭಾವವನ್ನು ಒಪ್ಪಿಕೊಳ್ಳಲೇಬೇಕಾದ್ದರಿಂದಲೂ, ಸೃಷ್ಟಿಗೆ ಬ್ರಹ್ಮವನ್ನೇ ನೇರವಾಗಿ ಕಾರಣವನ್ನಾಗಿ ಹೇಳಲಾಗದ್ದರಿಂದಲೂ ಮಾಯೆಯನ್ನು ಒಪ್ಪಿಕೊಳ್ಳಲಾಗಿದೆ. ಅದು ಸತ್ ಎಂದಾಗಲೀ, ಅಸತ್ ಎಂದಾಗಲೀ, ಬ್ರಹ್ಮಭಿನ್ನವೆಂದಾಗಲೀ, ಅಭಿನ್ನವೆಂದಾಗಲೀ ಹೇಳಲಾಗದ್ದು; ಆದರೆ ಅನಿರ್ವಚನೀಯವೂ, ವ್ಯವಹಾರದಲ್ಲಿ ಅನುಭವಕ್ಕೆ ಬರುವುದೂ ಎಂದು ಶಾಸ್ತ್ರಕಾರರ ಅಭಿಪ್ರಾಯ. ಮಾಯೆಯ ಅನಿರ್ವಚನೀಯತ್ವವೂ ಅನೇಕ ವೇಳೆ ಹಾಸ್ಯಕ್ಕೀಡಾಗಿದೆ. ವಿಚಾರಿಸಿ ನೋಡಿದರೆ ಅದಕ್ಕಿಂತ ಉತ್ತಮವಾಗಿ ಮಾಯೆಯನ್ನು ವರ್ಣಿಸುವುದು ಅಸಾಧ್ಯವೆಂದು ಗೊತ್ತಾಗುವುದು. ಪ್ರಮಾಣಗಳ ಮೂಲಕವಾಗಿ. ಯುಕ್ತಿಯಿಂದ ಅಜ್ಞಾನವನ್ನು ತಿಳಿದುಕೊಳ್ಳುವುದಾಗಲೀ. ವಿವರಿಸುವುದಾಗಲೀ ಬೆಳಕಿನ ಸಹಾಯದಿಂದ ಕತ್ತಲೆಯನ್ನು ಹುಡುಕಿದಂತೆ—**ಅಜ್ಞಾನಂ ಜ್ಞಾತುಮಿಚ್ಛೇದ್ಯೋ ಮಾನೇನಾತ್ಯಂತ ಮೂಢಧೀಃ। ಸ ತು ನೂನಂ ತಮಃ ಪಶ್ಯೇದ್ದೀಪೇನೋತ್ತಮ ತೇಜಸಾ॥** ಸ್ವಾಮಿ ವಿವೇಕಾನಂದರೆಂದಂತೆ, 'ವೇದಾಂತದಲ್ಲಿ ಬರುವ ಪೂರ್ಣ ರೂಪವನ್ನು ಪಡೆದ ಮಾಯಾಭಾವನೆಯು ಭಾವಸತ್ತಾಪಾದವೂ ಅಲ್ಲ. ವಸ್ತುಸತ್ತಾವಾದವೂ ಅಲ್ಲ, ಅದೊಂದು ಸಿದ್ಧಾಂತವೇ ಅಲ್ಲ. ಅದೊಂದು ವಾಸ್ತವ ಸ್ಥಿತಿಯ ನಿರೂಪಣೆ ಅಷ್ಟೆ. ನಾವೇನಾಗಿರುವೆವೋ, ಸುತ್ತಲೂ ಏನನ್ನು ನೋಡುತ್ತೇವೆಯೋ ಅದರ ನಿರೂಪಣೆ'' (ಕೃತಿಶ್ರೇಣಿ, ಸಂ.೨. ಪು.೩೧).

ಈ ಮಾಯೆ ಅಥವಾ ಅಜ್ಞಾನವು ಭಾವರೂಪವೇ, ಅಭಾವರೂಪವೇ? ವಸ್ತುವೇ ಅನಿರ್ವಚನೀಯವಾಗಿರುವಾಗ ಅದರಲ್ಲಿ ವ್ಯಷ್ಟಿ, ಸಮಷ್ಟಿ ಎಂಬ ಭೇದವನ್ನು ಕಲ್ಪಿಸುವುದಾದರೂ ಹೇಗೆ ಎನ್ನುವ ವಿಚಾರದಲ್ಲಿ ಅದ್ವೈತಿಗಳಲ್ಲೇ ಅನೇಕ ಭಿನ್ನಾಭಿಪ್ರಾಯಗಳಿವೆ. ಇರತಕ್ಕ ವಸ್ತು ಬ್ರಹ್ಮವೊಂದೇ ಎಂದು ಹೇಳಲು ಹೊರಟ ಶಾಸ್ತ್ರ ಅನುಭವದಲ್ಲಿರತಕ್ಕ ಪ್ರಪಂಚವನ್ನು ಬ್ರಹ್ಮಭಿನ್ನವಲ್ಲ ಎಂದು ಹೇಳಿದರೂ ತಿಳಿದುಕೊಳ್ಳದ ಅಜ್ಞರ ಸಮಾಧಾನಕ್ಕಾಗಿ ಬ್ರಹ್ಮ ತನ್ನ ಮಾಯಾಶಕ್ತಿಯಿಂದ ಪ್ರಪಂಚವಾಗಿ ತೋರುತ್ತದೆ, ಅಥವಾ ಪ್ರಪಂಚವನ್ನು ಸೃಷ್ಟಿಮಾಡುತ್ತದೆ ಎಂದು ಹೇಳಿರುವುದೇ ವಿನಾ ಮಾಯೆಗೆ ಸ್ವತಂತ್ರವಾದ ಅಸ್ತಿತ್ವವನ್ನೇನೂ ಹೇಳಿಲ್ಲವೆಂದಮೇಲೆ ಮಾಯೆಯ ವಿವರದಿಂದೇನು? ಆದರೂ ವ್ಯವಹಾರ ಕಾಲದಲ್ಲಿ ಸಜಾತೀಯ ವಸ್ತುವಿನಿಂದ ಸಜಾತಿಯ ವಸ್ತ್ವಂತರಗಳು ಹುಟ್ಟುವುದನ್ನು ನಾವು ನೋಡುತ್ತೇವೆ, ಮನುಷ್ಯನ ಮನಸ್ಸಿಗೂ ಅದು ಯುಕ್ತಿಯುಕ್ತವಾಗಿ ತೋರುತ್ತದೆ. ಅನುಭವದಲ್ಲೂ ಪುಸ್ತಕವಿದೆ, ಘಟವಿದೆ ಎಂಬುದಾಗಿ ಪದಾರ್ಥಗಳೆಲ್ಲವೂ ಭಾವರೂಪವಾಗಿ ತೋರುತ್ತವೆಯಾದ್ದರಿಂದ ಅದಕ್ಕೆ ಕಾರಣವಾದ (ಬ್ರಹ್ಮಭಿನ್ನವಾದ) ಮಾಯೆಯೂ ಭಾವರೂಪವಾಗಿರಬೇಕೆಂದು ವೇದಾಂತಿಗಳಲ್ಲಿ ಕೆಲವರ ಅಭಿಪ್ರಾಯ. ಬ್ರಹ್ಮವನ್ನು ಸಾಕ್ಷಾತ್ ಕಾರಣವಾಗಿ ಹೇಳುವುದು ಇಬ್ಬರಿಗೂ ಸಮ್ಮತವಲ್ಲವಾದ್ದರಿಂದ ಜ್ಞಾನದ ಅಭಾವವನ್ನೇ ಜಗತ್ತಿಗೆ ಕಾರಣವೆಂದು ಹೇಳಿದಲ್ಲಿ ಅಭಾವದಿಂದ ಭಾವೋತ್ಪತ್ತಿ ಎಂಬ ದೋಷ ಬರುತ್ತದೆ. ಕಾರ್ಯಕಾರಣ ಭಾವಕ್ಕೂ ಧಕ್ಕೆ ಬರುತ್ತದೆ. ಆದ್ದರಿಂದ ಅಜ್ಞಾನವನ್ನು ಭಾವರೂಪವೆಂದು ಹೇಳುವುದರಲ್ಲಿ ತಪ್ಪೇನಿದೆ? ಅದು ಭಾವರೂಪವೆಂದ ಮಾತ್ರಕ್ಕೆ ಬ್ರಹ್ಮದಂತೆ ಸತ್ಯವೆಂದಾಗಬೇಕಾಗಿಲ್ಲ. ಮಾಯೆಯನ್ನು ಒಪ್ಪಿಕೊಂಡಿರುವುದೇ ವ್ಯವಹಾರ ದೃಷ್ಟಿಯಿಂದ, ಪರಮಾರ್ಥತಃ ಅಲ್ಲ ಎನ್ನುವುದನ್ನು ನಾವು ಮತ್ತೊಮ್ಮೆ ಗಮನಿಸಿಕೊಳ್ಳಬೇಕು.

ನಾವು ಈ ಮೊದಲೇ ನೋಡಿದಂತೆ ಜಗತ್ತಿನ ಮಿಥ್ಯಾತ್ವವನ್ನು ಸಾಧಿಸುವುದರಲ್ಲೆ ಅದ್ವೈತಾಚಾರ್ಯರುಗಳ ಪರಮ ತಾತ್ಪರ್ಯವಿರಲಿಲ್ಲ. ಮನುಷ್ಯನು ಸ್ವಾಭಾವಿಕವಾಗಿಯೇ ಸುಖಕ್ಕೋಸ್ಕರವಾಗಿಯೂ ದುಃಖನಿವೃತ್ತಿಗಾಗಿಯೂ ಯತ್ನಿಸುತ್ತಿರುತ್ತಾನೆ. ಅದರೆ ಅದನ್ನು ಸಾಧಿಸಲು ಸರಿಯಾದ ಮಾರ್ಗ ತಿಳಿಯದವನಾಗಿ ಕಷ್ಟಪಡುತ್ತಿರುವಾಗ ಅಧ್ಯಾತ್ಮಶಾಸ್ತ್ರ ಅವನಿಗೆ ಮಾರ್ಗದರ್ಶನವನ್ನೀಯುತ್ತದೆ. ಜೀವನು ನಿಜವಾಗಿಯೂ ಸುಖಸ್ವರೂಪನೇ. ದುಃಖವಾದರೋ ಅವನಿಗೆ ಆಗಂತುಕ, ತನ್ನ ನಿಜಸ್ವರೂಪದ ಅಜ್ಞಾನದಿಂದಾಗಿ ಬಂದಿರತಕ್ಕದ್ದು. ಸ್ವರೂಪದ ಅರಿವಾದರೆ ದುಃಖ ತನ್ನಷ್ಟಕ್ಕೇ ಪರಿಹಾರವಾಗುತ್ತದೆ ಎಂಬುದು ಶಾಸ್ತ್ರದ ತಿರುಳು. ಸ್ವರೂಪ ಸುಖವನ್ನು ಅನುಭವಿಸುವುದೇ ಮುಕ್ತಿ ಎನ್ನುವುದು ಎಲ್ಲ ವಾದಿಗಳಿಗೂ ಸಮ್ಮತ. **ಮುಕ್ತಿಃ ನೈಜಸುಖಾನುಭೂತಿಃ** ಎಂಬುದಾಗಿ ದ್ವೈತಮತ ಸ್ಥಾಪಕರಾದ ಆಚಾರ್ಯ ಮಧ್ವರೇ ತಿಳಿಸಿದ್ದಾರೆ. ಆದರೆ ಈ ಜೀವನು ಬ್ರಹ್ಮಕ್ಕಿಂತ ಭಿನ್ನವಲ್ಲ ಎಂಬುದು ಅದ್ವೈತಿಗಳ ವಾದ. ಯಾವುದು ಸತ್ಯವೋ ಅದು ಜ್ಞಾನವೂ ಅನಂತವೂ ಆಗಿರಬೇಕು. ಜೀವ ಜಗತ್ತುಗಳು ಸತ್ಯವಾದ ಬ್ರಹ್ಮಕ್ಕೆ ಭಿನ್ನವಾದಲ್ಲಿ ಅದರ ಅನಂತತೆಗೆ ಭಂಗ ಬಂದೀತೆಂಬುದು ಅದ್ವೈತಿಗಳ ಆಕ್ಷೇಪ.

ಮೇಲಿನ ವಿಚಾರದಿಂದ ಎಲ್ಲ ಮತಗಳಂತೆ ಸುಖಪ್ರಾಪ್ತಿ ಮತ್ತು ದುಃಖನಿವೃತ್ತಿಯೇ ಅದ್ವೈತ ಶಾಸ್ತ್ರದ ಪರಮೋದ್ದೇಶ ಎನ್ನುವುದು ಖಚಿತವಾಗುತ್ತದೆ. ಅಧ್ಯಾತ್ಮ ಶಾಸ್ತ್ರವೆಲ್ಲವೂ "ನಾನು ಬದ್ಧನಾಗಿದ್ದೇನೆ. ಮುಕ್ತಿಯನ್ನು ಪಡೆಯಬೇಕು", ಎನ್ನುವ ಮುಮುಕ್ಷುಗಳಿಗಾಗಿ ಎನ್ನುವುದನ್ನು ಮರೆಯಬಾರದು. ಅದು ಅತ್ಯಂತ ಪಾಮರನಿಗಾಗಲೀ, ಬ್ರಹ್ಮಜ್ಞಾನಿಗಾಗಲೀ ಅಲ್ಲ. ಜ್ಞಾನಿಯು ಪರಮ ಪುರುಷಾರ್ಥವನ್ನು ಪಡೆದವನಾದ್ದರಿಂದ ಅವನಿಗೆ ಶಾಸ್ತ್ರದಿಂದಾಗಬೇಕಾದದ್ದೇನೂ

ಇಲ್ಲ. ಅನಿತ್ಯವಾದ ಜೀವ ಮತ್ತು ಜಗತ್ತುಗಳ ಹಿನ್ನೆಲೆಯಲ್ಲಿ ನಿತ್ಯವಾದ ವಸ್ತುವೊಂದಿರಬಹುದೆ? ಈ ಕಷ್ಟಮಯವಾದ ಸಂಸಾರದಿಂದ ಪಾರಾಗಲು ಏನಾದರೂ ಮಾರ್ಗವಿದೆಯೇ ಎಂಬುದನ್ನು ವಿಚಾರಿಸದೆ ತನ್ನ ದೈನಂದಿನ ಜೀವನದಲ್ಲೇ ನಿರತನಾಗಿ ಇಲ್ಲಿ ತನ್ನ ಇರವು ಶಾಶ್ವತವೆನ್ನುವ ಪಾಮರನಿಗೂ ಶಾಸ್ತ್ರಗಳಿಂದ ಪ್ರಯೋಜನವಾಗುವಂತಿಲ್ಲ. ಸಾಧನಮಾರ್ಗ ವನ್ನು ತೋರಿಸಿ ಜನರನ್ನು ಮುಕ್ತರನ್ನಾಗಿ ಮಾಡುವುದು ಶಾಸ್ತ್ರಾಚಾರ್ಯರ ಮುಖ್ಯ ಉದ್ದೇಶವಾದರೂ ಸಾಧನ ಸಮಯದಲ್ಲಿ ಬರಬಹುದಾದ ಅನೇಕ ಸಂಶಯಗಳನ್ನು ಯುಕ್ತಿ ಯುಕ್ತವಾಗಿ ಪರಿಹರಿಸುವುದೂ ಅವರ ಕರ್ತವ್ಯವಾಗಿದೆ. ಆದ್ದರಿಂದಲೇ ಗುರುವಾದವನು ಶ್ರೋತ್ರಿಯನೂ (ಶಾಸ್ತ್ರಜ್ಞ), ಬ್ರಹ್ಮನಿಷ್ಠನೂ ಆಗಿರಬೇಕೆಂದು ಶ್ರುತಿ ಹೇಳುತ್ತದೆ. ಕಾರ್ಯ ಕಾರಣ ಭಾವವನ್ನು ಮೀರಲಾರದ ಮುಮುಕ್ಷುವಿನ ಮನಸ್ಸಿನಲ್ಲಿ ಬ್ರಹ್ಮ, ಸೃಷ್ಟಿ ಇವೇ ಮೊದಲಾದವುಗಳ ಸಂಬಂಧವಾಗಿ ಬರಬಹುದಾದ ಅನೇಕ ಸಂಶಯಗಳ ಪರಿಹಾರಕ್ಕಾಗಿ ನಡುವೆ ಅನಿರ್ವಚನೀಯವಾದ ಮಾಯೆ ಎಂಬುದನ್ನೂ, ಪ್ರಪಂಚ ಅದರ ಕಾರ್ಯವೆಂಬುದನ್ನೂ ಅದ್ವೈತಶಾಸ್ತ್ರ ಹೇಳುತ್ತದೆ ಎಂದಮಾತ್ರಕ್ಕೆ ಮಾಯೆ ಎಂಬ ಕಾರಣದಿಂದ ಮಿಥ್ಯಾಪ್ರಪಂಚದ ಉತ್ಪತ್ತಿಯಾಗಿದೆ ಎಂದೇನೂ ಆಗಲಾರದು ತಾನೆ? ಪರಮಾರ್ಥ ಮತ್ತು ವ್ಯವಹಾರ ಸತ್ಯಗಳಲ್ಲಿನ ಭೇದವನ್ನು ಚೆನ್ನಾಗಿ ತಿಳಿದುಕೊಂಡಲ್ಲಿ ಮೇಲಿನ ಆಕ್ಷೇಪಗಳಿಗೆ ಅವಕಾಶವಿರುವುದಿಲ್ಲ.

ಅದ್ವೈತ ವೇದಾಂತದಲ್ಲೆಲ್ಲ ಬ್ರಹ್ಮ, ಜಗತ್ತು, ಮಾಯೆ, ಅದರ ಸ್ವರೂಪ—ಇವುಗಳನ್ನೆಲ್ಲಾ ಸವಿಸ್ತಾರವಾಗಿ ವರ್ಣಿಸಿದೆ ಯಾದರೂ ಆ ಬಗ್ಗೆ ಅನೇಕ ವಾದವಿವಾದಗಳು ಹುಟ್ಟಿವೆ ಯಾದರೂ, ಅದರ ಮುಖ್ಯೋದ್ದೇಶ ಮುಮುಕ್ಷುಗಳನ್ನು ಸತ್ಯದೆಡೆಗೆ ಒಯ್ದು ಮುಕ್ತರನ್ನಾಗಿ ಮಾಡುವುದೆ ಎಂದು ನಾವು ಮೊದಲೇ ನೋಡಿದ್ದೇವೆ. ಅದಕ್ಕಾಗಿ ನಿತ್ಯಾನಿತ್ಯ–ವಸ್ತು–ವಿವೇಕ, ವೈರಾಗ್ಯ, ಶಮದಮಾದಿಗಳು, ವಿವಿದಿಷಾ ಸಂನ್ಯಾಸ, ಶ್ರವಣವೇ ಮೊದಲಾದ ಸಾಧನಗಳನ್ನು ಶಾಸ್ತ್ರ ವಿಧಿಸಿದೆ. ಅಧ್ಯಾತ್ಮಶಾಸ್ತ್ರ ವಿವೇಚನೆಗೆ ಈ ಸಾಧನಚತುಷ್ಟಯಸಂಪನ್ನ ನಾದವನು ಮಾತ್ರ ಅಧಿಕಾರಿ ಎಂದು ಶಾಸ್ತ್ರಾಚಾರ್ಯರುಗಳು ಮತ್ತೆ ಮತ್ತೆ ಒತ್ತಿ ಹೇಳಿರುತ್ತಾರೆ. ಈ ಎಲ್ಲ ಸಾಧನಗಳನ್ನು ಅನುಷ್ಠಾನಕ್ಕೆ ತರದೆ ಬ್ರಹ್ಮ, ಸೃಷ್ಟಿ, ಮಾಯೆ ಇವುಗಳ ಬಗ್ಗೆ ಬರಿಯ ಪುಸ್ತಕ ಪಠನದಿಂದಾಗಲೀ, ವ್ಯಾಖ್ಯಾನ ಕೌಶಲ ದಿಂದಾಗಲಿ, ಪರಮಪುರುಷಾರ್ಥ ಕೈಗೂಡುವುದಿಲ್ಲವೆಂಬು ದಾಗಿ ಆಚಾರ್ಯ ಶಂಕರರೇ ಮೊದಲಾಗಿ ಎಲ್ಲ ಅದ್ವೈತಾ ಚಾರ್ಯರು ಸಾರಿಹೇಳಿದ್ದಾರೆ. **ಏವಂ ಹಿ ವಿರಕ್ತಸ್ಯ ಪ್ರತ್ಯಗಾತ್ಮ ವಿಷಯಂ ಶ್ರೋತುಂ ಮನ್ತುಂ ವಿಜ್ಞಾತುಂ ಚ ಸಾಮರ್ಥ್ಯಮ್ ಉಪಪದ್ಯತೇ**—ಹೀಗೆ ವಿರಕ್ತನಾದವನಿಗೆ ಮಾತ್ರ ಪ್ರತ್ಯಗಾತ್ಮದ ವಿಷಯದ ಜ್ಞಾನವನ್ನು ಕುರಿತು ಶ್ರವಣ ಮನನ ಮಾಡಿ ಅರಿತುಕೊಳ್ಳುವುದಕ್ಕೆ ಸಾಮರ್ಥ್ಯ ಉಂಟಾಗುವುದೇ ವಿನಾ ಬೇರೆ ಮಾರ್ಗದಿಂದಲ್ಲ. **ವಿರಕ್ತಸ್ಯ ಹಿ ಸಂಸಾರಾತ್ ಭಗವತ್ತತ್ತ್ವಜ್ಞಾನೇ ಅಧಿಕಾರಃ ನಾನ್ಯಸ್ಯ** ಇತಿ ಸಂಸಾರದಲ್ಲಿ ವಿರಕ್ತ ನಾದವನಿಗೇ ಭಗವತ್ತತ್ತ್ವವನ್ನು ಅರಿತುಕೊಳ್ಳುವುಕ್ಕೆ ಅಧಿಕಾರ ವಿರುವುದೇ ಹೊರತು ಮತ್ತೆ ಯಾರಿಗೂ ಇಲ್ಲ. **ವಾಗ್ವೈಖರೀ ಶಬ್ದಝರೀ ಶಾಸ್ತ್ರವ್ಯಾಖ್ಯಾನಕೌಶಲಂ ವೈದುಷ್ಯಂ ವಿದುಷಾಂ ತದ್ವತ್ ಭುಕ್ತಯೇ ನ ತು ಮುಕ್ತಯೇ!** ಪಂಡಿತರ ಶಬ್ದಗಳ ಪ್ರವಾಹ, ಶಾಸ್ತ್ರವಿವರಣೆಯಲ್ಲಿ ಕೌಶಲ ಮತ್ತು ಪಾಂಡಿತ್ಯ ಇವು ಭೋಗಕ್ಕೆ ಸಾಧನವಾಗಬಲ್ಲವೇ ವಿನಾ ಮುಕ್ತಿಗೆ ಆಗಲಾರವು ಎಂಬಿವೇ ಮೊದಲಾದ ಆಚಾರ್ಯರ ವಾಣಿ ಗಳನ್ನು ನಾವು ಗಮನದಲ್ಲಿಡಬೇಕು. ಇಂತಹ ಅಧಿಕಾರವನ್ನು ಪ್ರಯತ್ನಪೂರ್ವಕವಾಗಿ ಪಡೆಯದೆ ತಾನು ಅದ್ವೈತಿ ಎನ್ನು ವವನ ಬಗ್ಗೆ ಸರ್ವಜ್ಞ ವ್ಯಂಗ್ಯವಾಗಿ ಹೇಳಿದ ಮಾತು ಗಮನಾರ್ಹ. **ಅದ್ವೈತ ಕೋಡಾಡಿ । ಇದ್ದುದನು ಹೋಗಾಡಿ। ಉದ್ದನಾ ಮರನ ತುದಿಗೇರಿ । ತಲೆಯೂರಿ ಬಿದ್ದುಸತ್ತಂತೆ ! ಸರ್ವಜ್ಞ ॥**

ಪರಮಹಂಸರೆಂದಂತೆ ಪಂಚಾಂಗವು ವರ್ಷದಲ್ಲಿ ಬರತಕ್ಕ ಮಳೆ ಎಷ್ಟೆಂಬುದನ್ನು ಹೇಳುತ್ತದೆ, ಆದರೆ ಅದನ್ನು ಹಿಂಡಿದಲ್ಲಿ ಒಂದು ತೊಟ್ಟು ನೀರೂ ಸಿಗಲಾರದು. ಅಂತೆಯೇ ಅಧಿಕಾರಿ ಯಾದವನು ಶಾಸ್ತ್ರವನ್ನು ತಿಳಿದು ಅನುಷ್ಠಾನಮಾಡಿ ಪರಮ ಪದವನ್ನು ತನ್ಮೂಲಕ ಪಡೆಯಬಹುದು, ಬರಿಯ ಶಾಸ್ತ್ರಪಠನ ದಿಂದಲ್ಲ. ಶಾಸ್ತ್ರವು ಬರಿಯ ವಿದ್ವಾಂಸರ ಮನೋರಂಜನಾ ಸಾಮಗ್ರಿಯಲ್ಲ, ದಾರಿದೀಪದಂತೆ ಮುಮುಕ್ಷುಗಳಿಗೆ ಮಾರ್ಗದರ್ಶನವನ್ನೀಯುವುದಕ್ಕೆ.

ಆಚಾರ್ಯ ಶಂಕರರನ್ನು, ಮಾಯಾವಾದಿಗಳು, ಮಿಥ್ಯಾ ವಾದಿಗಳು ಎಂದು ಜನ ಹೇಳುವುದುಂಟು. ಆದರೆ ಮೇಲಿನ ವಿಮರ್ಶೆಯಿಂದ ಮಾಯೆಯ ಅಸ್ತಿತ್ವವನ್ನು ಸಾಧಿಸು ವುದಾಗಲೀ ಪ್ರಪಂಚದ ಮಿಥ್ಯಾತ್ವವನ್ನು ಸಾಧಿಸುವುದಾಗಲೀ ಅವರ ಮುಖ್ಯೋದ್ದೇಶವಲ್ಲವೆಂದು ತಿಳಿದುಬರುತ್ತದೆ. ಅವರನ್ನು ಮಾಯಾವಾದಿಗಳೆನ್ನುವುದು ಭಗವಾನ್ ಬುದ್ಧ ನನ್ನು ಕ್ಷಣಿಕವಾದಿ ಎನ್ನುವಷ್ಟೇ ಅಸಮಂಜಸ. ಪರಮ ಪುರುಷಾರ್ಥದೆಡೆಗೆ ಮಾರ್ಗದರ್ಶನ ಮಾಡುವುದೇ ಅವರೆಲ್ಲರ ಮುಖ್ಯ ಉದ್ದೇಶವಾಗಿತ್ತು.

**ಸಮತೆಸಂಯಮಶಮಗಳಿಂ ಭವವನೋಲಗಿಸೆ ।**
**ಸಮನಿಪುದು ಮತಿಯ ಹದವಾತ್ಮಾನುಭವಕೆ ॥**
**ಮಮತೆಯಳಿವಿಂ ಜ್ಞಾನ; ಪಾಂಡಿತ್ಯದಿಂದಲ್ಲ ।**
**ಶ್ರಮಿಸಿಳೆಯ ಗಾಣದಲಿ ಮಂಕುತಿಮ್ಮ ॥**

(ಮಂಕುತಿಮ್ಮನ ಕಗ್ಗ ೭೦೪)

✪